ಪಿ.ಡಬ್ಲ್ಯೂ-2

ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 24-01-2023

ಪಾಟಿ ಸವಾಲುಃ ಶ್ರೀ. ಪಿ.ಕೆ.ಜಿ ವಕೀಲರಿಂದ

ನಾನು ದೊಡ್ಡಮಳ್ತೆ ಗ್ರಾಮದವನಾಗಿರುತ್ತೇನೆ, ನನಗೆ ವಾದಿ ಮತ್ತು ಪ್ರತಿವಾದಿಗಳ ಪರಿಚಯ ಇದೆ ಅವರು ಹಣಕೊಡು ಗ್ರಾಮದವರಾಗಿರುತ್ತಾರೆ ನಮ್ಮ ಗ್ರಾಮಕ್ಕೂ ಅವರ ಗ್ರಾಮಕ್ಕೂ 1 ಕಿ.ಮೀ. ಅಂತರವಿದೆ. ಚಂದ್ರಪ್ಪ ವಾದಿಯ ಸಹೋದರರಾಗಿರುತ್ತಾರೆ, ವಾದಿಗಳು ಪಾಲನ್ನು ಮಾಡಿಕೊಂಡು 30 ವರ್ಷ ಆಗಿರುತ್ತದೆ, ಮಲ್ಲಪ್ಪ ರವರ ಮನೆಯಲ್ಲಿ ಕೂತು ವಿಭಾಗ ಮಾಡಿಕೊಂಡಿರುವಾಗ ಮಲ್ಲಪ್ಪ ವಾದಿಯ ತಂದೆ, ಪಾಲು ಮಾಡಿಕೊಳ್ಳುವಾಗ ಅವರೆಲ್ಲ ಒಟ್ಟಿಗೆ ಇದ್ದರೂ ಈಗ ಬೇರೆ ಇರುತ್ತಾರೆ. ಕೆ.ಪಿ.ಶಾಂತಪ್ಪ ಪಾಲುಪರಿಕತ್ತನ್ನು ಬರೆದಿರುತ್ತಾರೆ, ಆಗ ಸುಬ್ಬಯ, ನಿಂಗಸ್ವಾಮಿ, ಪುಟ್ಟರಾಜು, ಹೊಣ್ಣಪ್ಪ, ರಾಮಪ್ಪ ಇದ್ದರು, ಪಾಲುಪರಿಕತ್ತಿಗೆ ಸಾಕ್ಷಿದಾರರಾಗಿ ಯಾರೆಲ್ಲ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ, ನನಗೆ ಕನ್ನಡ ಓದಲು ಬರೆಯಲು ಬರುತ್ತದೆ, ವಾದಿ, ಪ್ರತಿವಾದಿ, ಚಂದ್ರಪ್ಪ ಮತ್ತು ಇತರರು ಇದ್ದರು.

ಪಾಲುಪರಿಕತ್ತಿಗೆ ಮಲ್ಲಪ್ಪ ಸಹಿ ಮಾಡಿದ್ದಾರೋ ಅಥವಾ ಹೆಬ್ಬೆಟ್ಟು ಹಾಕಿದ್ದಾರೋ ಎಂದು ನನಗೆ ಗೊತ್ತಿಲ್ಲ, ಕೃಷ್ಣಪ್ಪ ಸಹಿ ಮಾಡಿರುವುದನ್ನು ನೋಡಿದ್ದು ಅವರು ಯಾವ ಭಾಷೆಯಲ್ಲಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ, ಪಾಲುಪರಿಕತ್ತನ್ನು ಖಾಲಿ ಬಿಳಿ ಕಾಗದದ ಮೇಲೆ ಬೆದಿರುತ್ತಾರೆ. ಅವರಿಗೆ ಕಿಬ್ಬೆಟ್ಟದಲ್ಲಿ ಆಸ್ತಿ ಇರುತ್ತದೆ ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ, ಅದು ಹೊನಪ್ಪ, ಕೃಷ್ಣಪ್ಪ, ಚಂದ್ರಪ್ಪ, ವಾದಿ ಪ್ರತಿವಾದಿಗೆ ಹೋಗಿರುತ್ತದೆ, ಎಷ್ಟೆಷ್ಟು ಆಸ್ತಿ ಹೋಗಿದೆ ಎಂದು ನನಗೆ ಗೊತ್ತಿಲ್ಲ. ಪಾಲುಪರಿಕತ್ತು ಮಾಡಿದ ವಿಷಯ ನನಗೆ ಗೊತ್ತಿಲ್ಲ, ಪತ್ರ ಆಗುವಾಗ ಕೃಷ್ಣಪ್ಪ ಅಲ್ಲಿ ಇರಲಿಲ್ಲ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ಆ ರೀತಿಯ ಪಾಲುಪರಿಕತ್ತು ಆಗಿಲ್ಲ ಎಂದರೆ ಸರಿಯಲ್ಲ, ಪುಟ್ಟಸ್ವಾಮಿ ಮತ್ತು ಚಂದ್ರಪ್ಪ ರವರು ಮಾತ್ರ

ಪಾಲುಪರಿಕತ್ತನ್ನು ಮಾಡಿಕೊಂಡಿದ್ದು ಅದರಲ್ಲಿ ಕೃಷ್ಣಪ್ಪಗಿಂತ ಜಾಸ್ತಿ ಆಸ್ತಿಯನ್ನು ಚಂದ್ರಪ್ಪ ಪಡೆದಿರುತ್ತಾರೆ ಎಂದರೆ ಸರಿಯಲ್ಲ, ಪಾಲುಪರಿಕತ್ತು ಮಾಡಿದ ವಿಷಯ ಕೃಷ್ಣಪ್ಪನಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ, ಮಲ್ಲಪ್ಪ ನನ್ನ ದೂರದ ಸಂಬಂಧಿಕರು, ಪುಟ್ಟಸ್ವಾಮಿ ಪತ್ರ ಬರೆದುಕೊಂಡು ಬಂದಿದ್ದರು ನಾನು ಬರಿ ಸಹಿ ಮಾತ್ರ ಹಾಕಿದ್ದೇನೆ ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ನಾನು ಪ್ರತಿ ಪುಟಕ್ಕೂ ಸಹಿ ಮಾಡಿಲ್ಲ ಕೊನೆಯ ಪುಟದಲ್ಲಿ ಮಾತ್ರ ಸಹಿ ಮಾಡಿರುತ್ತೇನೆ, ಪಾಲುಪರಿಕತ್ತಿನ 6 ನೇ ಪುಟಕ್ಕೆ ಸಹಿ ಮಾಡಿರುತ್ತೇನೆ ಮೊದಲು 5 ಪುಟಗಳಲ್ಲಿ ಇರುವ ವಿಚಾರಗಳನ್ನು ವಾದಿ ಬದಲಾಯಿಸಿದ್ದಾರೆ ಎಂದರೆ ಸರಿಯಲ್ಲ, ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯವಾಯಿತು.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).**

ಸಹಿ/-
ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ